ತೋಟದಲ್ಲಿ ನನ್ನ ಡಾಕ್ಟರ್ ಸ್ನೇಹಿತರಿದ್ದಾರೆ, ಅವರಿಗೇನಾದರೂ ಜೇನು ಕಡಿದು ಸಿಹಿಜೇನಿನ ಪರಿಣಾಮ... ಕಹಿಕಹಿಯಾದೀತು, ಅವರಿಗೆ ಮುಂಚಿತವಾಗೇ ವಿಷಯ ತಿಳಿಸಬೇಕೆ ಎಂಬ ಪ್ರಶ್ನೆ. ಇದಕ್ಕೂ ಜಡೆಯಪ್ಪನ ಉತ್ತರ, 'ಅಷ್ಟು ದೂರ ಈ ಜೇನು ಹೋಗಾದೇ ಇಲ್ಲ ಸಾ...'

ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡು, ಒಂದು ಬಗೆಯ ಪುಳಕ – ಅಳುಕುಗಳ ದ್ವಂದ್ವದಲ್ಲಿ ಜೇನುಬೇಟೆಗೆ ಸನ್ನದ್ಧರಾದೆವು. ಜಡೆಯಪ್ಪ ತನ್ನ ಇಬ್ಬರು ಶಿಷ್ಯರೊಡನೆ ಬಂದ. ಯಾರ್‍ಯಾರು ಯಾವಯಾವ ಕ್ಯಾಮೆರಾ ಹಿಡಿದು ಶೂಟ್ ಮಾಡುವುದು ಎಂದು ನಿಗದಿಯಾಯಿತು. ನನಗೆ ನಮ್ಮ ವಿವೇಕನದೇ ಚಿಂತೆ. ಇವನು ಉತ್ಸಾಹಿ ತರುಣ, ಎಂಜಿನಿಯರ್. ಮರದ ಕೆಳಗೆ ನಿಂತು ಶೂಟ್ ಮಾಡುವುದು ಇವನ ಕೆಲಸ. ಇವನಿಗೆ ಜೇನು ಕಡಿದು ದೊಡ್ಡ ಅವಾಂತರವಾದರೆ ಏನು ಗತಿ! ನಮ್ಮ ದೀಪಿಕಾ ಅಂತೂ ತನಗೆ ಜೇನುಗಳು ಕಡಿಯುವುದೇ ಇಲ್ಲವೆಂದು ನನ್ನ ಅಳುಕನ್ನು ಅಣಕಿಸುವ ಧ್ವನಿಯಲ್ಲಿ ಹುಂಬುತನದ ಧೈರ್ಯ ತೋರಿಸುತ್ತಾಳೆ. ಈ ಹುಡುಗರಾರೂ ನನ್ನ ಮಾತಿಗೆ ಸೊಪ್ಪು ಹಾಕುವವರಲ್ಲ. ಜೇನುಹುಳುಗಳು ಕಡಿಯುವುದಿಲ್ಲ ಅನ್ನುವ ಇವರ ಪಲ್ಲವಿಗೆ ಜಡೆಯಪ್ಪನ ಅದೇ ಅನುಪಲ್ಲವಿ ಬೇರೆ. ನಾನಂತು ಸಿಟ್ಟು ಮಾಡಿಕೊಂಡು ರಕ್ಷಣೆಯ ಎಲ್ಲಾ ಸಿದ್ಧತೆಗಳನ್ನೂ ಆರಂಭಿಸಿದೆ. ವಿವೇಕ ನಿಲ್ಲುವ ಸ್ಥಳದ ಸುತ್ತಲೂ ಸಾಕಷ್ಟು ಸೌದೆ ರಾಶಿ ಹಾಕಿ ಹೊಗೆ ಏಳಿಸಲು ಏರ್ಪಾಟು ಮಾಡಿದೆ. ಹಾಗೆಯೇ ದೀಪಿಕ, ಚಂದನ್ ನಿಲ್ಲುವ ಸ್ಥಳದ ಸುತ್ತಲೂ ದೊಡ್ಡ ಸೌದೆ ರಾಶಿ ಹಾಕಿ ಹೊಗೆ ಏಳಿಸಲು ಏರ್ಪಾಟು ಮಾಡಿದೆ.

ಜಡೆಯಪ್ಪನ ಶಿಷ್ಯರಿಬ್ಬರೂ ಏಕಾಏಕಿ ಎಲ್ಲಿಗೋ ಹೊರಟು ಹೋದರು. ಸ್ವಲ್ಪ ಹೊತ್ತಾದ ಅನಂತರ ಒಂದು ಸಣ್ಣ ಹೊರೆ ಒಣಗಿದ ಲಾಂಟಾನ ಕಡ್ಡಿಗಳನ್ನು ತಂದರು. 'ಎಲ್ಲೀಗ್ ಹೋಗಿದ್ರಯ್ಯ' ಎಂದೆ. 'ಏನಿಲ್ಲ, ಸ್ವಲ್ಪ ಅಂಬು ತರಾಕ್ಕೆ' ಎಂದು ಉಗನೆ ಹಂಬಿನ ಬಳ್ಳಿ ತೋರಿಸಿದರು. 'ಕೇಳಿದ್ರೆ ಪ್ಲಾಸ್ಟಿಕ್ ಹಗ್ಗ ಕೊಡ್ತಾ ಇದ್ನಲ್ಲಯ್ಯ' ಎಂದೆ. 'ಬ್ಯಾಡಿಸಾ... ಅದು ಬೆಂದೋಯ್ತದೆ' ಎಂದ. ಇಬ್ಬರೂ ಸೇರಿ 'ಸೂಡು' ಕಟ್ಟುವ ಕೆಲಸ ಆರಂಭಿಸಿದರು. ಸೂಡು ಹೊಗೆ ಕಾರುವ ಬೆಂಕಿಯ ಪಂಜು. ಪ್ಲಾಸ್ಟಿಕ್ ದಾರ ಬೇಡ, ಹಸಿರು ಬಳ್ಳಿಯೇ ಸಾಕು ಎಂದದ್ದು ಅರ್ಥವಾಯಿತು. ಸೂಡು ಕಟ್ಟುವುದು ಒಂದು ಕಲೆ. ಅದಿಲ್ಲದೆ ಜೇನು ಇಳಿಸುವುದು ಸಾಧ್ಯವೇ ಇಲ್ಲ. ಸೂಡು ಕಟ್ಟುವುದನ್ನು ಚಿತ್ರೀಕರಣ ಮಾಡಲಾರಂಭಿಸಿದೆವು. ಮೊದಲು ಹಸಿಬಳ್ಳಿಯನ್ನು ನಾಲ್ಕು ತುಂಡುಗಳಾಗಿ ಮಾಡಿ, ಉದ್ದಕ್ಕೆ ನೆಲದ ಮೇಲೆ ಹರಡಿ, ಅದರ ಮೇಲೆ ಸುಮಾರು ಎರಡುವರೆ ಅಡಿ ಉದ್ದಕ್ಕೆ ಒಂದುವರೆ ಅಡಿ ಅಗಲಕ್ಕೆ ಹಸಿನೇರಳೆ ಸೊಪ್ಪನ್ನು ದಪ್ಪನಾಗಿ ಹರಡಿದರು. ಇದರ ಮಧ್ಯದಲ್ಲಿ ಉದ್ದನಾಗಿ ಲಾಂಟಾನ ಕಡ್ಡಿಗಳನ್ನು ಜೋಡಿಸಿ ಮೇಲೆ ಮತ್ತೆ ನೇರಳೆ ಸೊಪ್ಪು ಮುಚ್ಚಿ ಅಂಬಿನಿಂದ ಎಳೆದು ಕಟ್ಟಿದರು. ಲಾಂಟಾನ ಕಡ್ಡಿಗಳ ತಿರುಳಿಗೆ ನೇರಳೆ ಸೊಪ್ಪಿನ ಹೊದಿಕೆಯ ಸೂಡು ಸಿದ್ಧವಾಯಿತು. ಒಳಗೆ ಲಾಂಟಾನ ಕಡ್ಡಿಗಳು ಎಷ್ಟಿರಬೇಕು, ಅದರ ಮೇಲೆ ನೇರಳೆ ಸೊಪ್ಪು ಎಷ್ಟಿರಬೇಕು – ಇದು ಅನುಭವಿ ವಿಜ್ಞಾನ. ಸೂಡು ಸಿದ್ಧವಾದ ಮೇಲೆ ನಾವು ಕೆಳಗೆ ಹರಡಿದ್ದ ಸೌದೆ ರಾಶಿಗಳಿಗೆ ಬೆಂಕಿಹಾಕಿದೆವು. ಆದರೆ, ನಮಗೆ ಬೇಕಾದದ್ದು ಬೆಂಕಿಯಲ್ಲ, ಹೊಗೆ. ಸುತ್ತಮುತ್ತ ಬೆಳೆದ ಕಾಡುಗಿಡಗಳ ಹಸಿ ಸೊಪ್ಪನ್ನು ಮುರಿದು ಬೆಂಕಿಗೆ ಹಾಕಿದೆವು. ಧಗಧಗಿಸುತ್ತಿದ್ದ ಬೆಂಕಿ ಮೆತ್ತಗಾಯಿತು, ದಟ್ಟವಾದ ಮೋಡದಂತೆ ಹೊಗೆ ಎದ್ದಿತು. ಮೇಲೇರಿದ ಹೊಗೆಯಿಂದಾಗಿ ಕೆಲವೊಂದು ಜೇನುಗಳು ಗೂಡುಬಿಟ್ಟು ಎದ್ದವು. ಆದರೆ, ಕೆಳಗೆಲ್ಲಾ ಹೊಗೆ ಕವಿದಿದ್ದರಿಂದ ಜೇನು ಕೆಳಗೆ ಬರಲಿಲ್ಲ. ನಾವು ಬೆಂಕಿ ಧಗಧಗಿಸದಂತೆ ಹಸಿ ಸೊಪ್ಪಿನಿಂದ ಮುಚ್ಚಿ ದಟ್ಟವಾದ ಹೊಗೆಯನ್ನು ಏಳಿಸುತ್ತಿದ್ದೆವು. ಈ ನಡುವೆ ಪ್ಲಾಸ್ಟಿಕ್ ದಾರಕ್ಕೆ ಕಟ್ಟಿದ ಬಕೆಟ್ಟನ್ನು ಜಡಿಯಪ್ಪ ಮರದ ಜೇನಿನ ಸನಿಹಕ್ಕೆ ಏರಿಸಿ ಕಟ್ಟಿದ್ದ. ಜಡೆಯಪ್ಪನ ಶಿಷ್ಯರು ಸೂಡಿಗೆ ಬೆಂಕಿ ಕೊಟ್ಟರು. ಅಹಾ, ಅದೇನು ದಟ್ಟವಾದ ಹೊಗೆ! ಒಳಗೆ ಲಾಂಟಾನ ಕಡ್ಡಿಗಳು ಉರಿಯುತ್ತಿದ್ದುದು ನಮಗೆ ಕಾಣುತ್ತಿರಲಿಲ್ಲ, ಆದರೆ